

ಬುಡಕ್ಕುರುಳಿ ಕೆಲಕ್ಷಣ ತಳಮಳಿಸಿ ಜೀವ ಬಿಟ್ಟಿತು. ಆ ಪುಟ್ಟ ನಿಷ್ಪಾಪ ಜೀವಕ್ಕೆ ಕಲ್ಲಿನ ಗುರಿ ಇಟ್ಟಾಗ ನನ್ನ ಸೌಂದರ್ಯ ಪ್ರಜ್ಞೆ ನಾನು ಎಸಗಲಿರುವ ಕ್ರೌರ್ಯವನ್ನು ಮರೆಸಿತ್ತು. ಕಾಡಿನ ಪವಿತ್ರ ನಸುಕಿನಲ್ಲಿ ನನ್ನ ಆಸೆಯ ಆಟಕ್ಕೆ ರೆಕ್ಕೆಯ ಜೀವ ಬಲಿಯಾಗಿ ನಾನೊಬ್ಬ ಗುರಿ ಸಾಧಿಸಿದ ಅಹಂಕಾರಿ ಕೊಲೆಗಾರನಾಗಿದ್ದೆ. ಅದರ ಸಾವು ಕಂಡು ಶೋಕತಪ್ತನಾದೆ ಮತ್ತು ಇನ್ನು ಮೇಲೆ ಬೇಟೆಯಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದೆ.

ಶಾಲೆಗೆ ಬೇಸಿಗೆ ಸೂಟಿ ಶುರುವಾಗಿ ನಾವು ಹುಡುಗರು ಕಡು ನೀಲಾಕಾಶದ ಅಡಿಯ ಕೊಯ್ಲಾದ ಗದ್ದೆಯ ಬಯಲಲ್ಲಿ ಆಟವಾಡಲು ಸೇರುತ್ತಿದ್ದೆವು. ಬೆಲ್ಲದ ಪರಿಮಳದ ಆಲೆಮನೆ ಆರಂಭವಾಗುವ ಸಮಯಕ್ಕೆ ಸರಿಯಾಗಿ ಮರದ ಪೊಟರೆಗಳಲ್ಲಿ ಪಂಚರಂಗಿ ಗಿಳಿಗಳು ಇಡುತ್ತಿದ್ದ ಮೊಟ್ಟೆ ಒಡೆದು ಪೊಟರೆಯ ಕಿಂಡಿಯಿಂದ ಮರಿಗಳು ಚುಂಚನ್ನು ಹೊರ ಚಾಚುತ್ತಿದ್ದವು. ಪೊಟರೆಯಿಂದ ಒಂದು ಮರಿಯನ್ನು ನನಗಾಗಿ ಹಿಡಿದುಕೊಡಲು ನನ್ನ ಸಹಪಾಠಿ ಮಿತ್ರನಿಗೆ ದುಂಬಾಲು ಬಿದ್ದೆ. ಸಾಹಸದಿಂದ ಕಾಡಿನ ನಂದಿ ಮರವೇರಿ ಅವನು ರೆಕ್ಕೆ ಬಲಿಯದ ಮುದ್ದಾದ ಗಿಳಿ ಮರಿಯನ್ನು ಹಿಡಿದು ತಂದ. ಮನೆಯ ಬೆಕ್ಕಿನಿಂದ ಅದನ್ನು ಕಾಪಾಡುವುದು ನನ್ನ ಮೊದಲ ಕರ್ತವ್ಯವಾಯಿತು. ನಮ್ಮ ಮನೆಯ ದನಗಾಹಿಯನ್ನು ಪೀಡಿಸಿ ಚಿಟ್ಟೆಯ ಮೇಲಿರಿಸಿದ ಎಣ್ಣೆಯ ಖಾಲಿ ಟಿನ್‌ನಿಂದ ಪಂಜರ ಮಾಡಿಸಿಕೊಂಡೆ. ಟಿನ್ನಿನ ಮುಚ್ಚಳದ ಭಾಗವನ್ನು